**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸಿಜೆಎಂ, ರಾಯಚೂರು**
**ಸಿ.ಸಿ.ನಂಬರು.**1765/2018

**CW-7 / PW-2**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಅಶ್ವಿನಕುಮಾರ ಭಾಟಿಯಾ |
| ತಂದೆಃ ಹೆಸರು | ಃ | ಮಾಣಿಕಚಂದ್ |
| ವಯಸ್ಸು | ಃ | 56 |
| ಉದ್ಯೋಗ | ಃ | ವ್ಯಾಪಾರ |
| ವಿಳಾಸ | ಃ | ರಾಯಚೂರು |

**ಮುಖ್ಯ ವಿಚಾರಣೆ ಅಬಿಯೋಜನೆ ಪರ ಮಾನ್ಯ ಹಿರಿಯ ಸ.ಸ.ಅ.ಅವರಿಂದ**

**ಕಲಂ 299 ಸಿ.ಆರ್.ಪಿ.ಸಿ ಅಡಿಯಲ್ಲಿ ಸಾಕ್ಷಿ ವಿಚಾರಣೆ**

**ಪ್ರಮಾಣೀಕರಿಸಿದ ದಿನಾಂಕಃ 17-07-2025**

ಚಾಸಾ-6 ಗೊತ್ತಿಲ್ಲ. ಸಾಕ್ಷಿಗೆ ಎರಡು ದಾಖಲೆಗಳನ್ನು ತೋರಿಸಲಾಗಿ ಆ ದಾಖಲೆಗಳು ಒಂದು ಗುನ್ನೆ ಸ್ಥಳ ಪಂಚನಾಮೆಯಾಗಿದ್ದು ಇನ್ನೊಂದು ದಾಖಲಾತಿಗಳ ಜಪ್ತಿ ಪಂಚನಾಮೆಯಾಗಿರುತ್ತದೆ. ಸಾಕ್ಷಿಯು ಗುನ್ನೆ ಸ್ಥಳ ಪಂಚನಾಮೆ ಹಾಗೂ ಜಪ್ತಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು , ಗುನ್ನೆ ಸ್ಥಳ ಪಂಚನಾಮೆಯನ್ನು ನಿಪಿ-4 ಎಂದು ಗುರುತಿಸಲಾಯಿತು. ದಾಖಲಾತಿಗಳ ಜಪ್ತಿ ಪಂಚನಾಮೆಯನ್ನು ನಿಪಿ-5 ಎಂದು ಗುರುತಿಸಲಾಯಿತು. ದಿಃ 02-10-2010 ರಂದು ಬೆಳಿಗ್ಗೆ 9-00 ರಿಂದ 10-00 ಸುಮಾರಿಗೆ ಚಾಸಾ-1 ರವರ ಅಂಗಡಿಯಲ್ಲಿ ಮಾಡಲಾಯಿತು. ಅದೇ ದಿನ ದಾಖಲಾತಿಗಳ ಜಪ್ತಿ ಪಂಚನಾಮೆ ಮಾಡುವ ಸಂದರ್ಬದಲ್ಲಿ ಸಹಿಯನ್ನು ಮಾಡಿರುತ್ತೇನೆ. ಚೆಕ್ ಹಾಗೂ ರಿಸೀದಿ ಜಪ್ತಿ ಪಂಚನಾಮೆ ಮಾಡುವ ಮೂಲಕ ಅಮಾನತ್ತುಪಡಿಸಿಕೊಳ್ಳಲಾಯಿತು. ಚೆಕ್ಕನ ಮೊತ್ತ 49,380/- ಇರುತ್ತದೆ. ಸಾಕ್ಷಿಯು ಚೆಕ್ ಮತ್ತು ರಸೀದಿಯನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ನಿಪಿ-2 ಮತ್ತು 3 ಎಂದು ಗುರುತಿಸಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತುಲೇಖನೆ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿಕೊಂಡಿರುತ್ತಾರೆ.)

**ಪ್ರಧಾನ ಹಿರಿಯ ಸಿ.ಜೆ ಮತ್ತು ಸಿಜೆಎಂ, ರಾಯಚೂರು.**